

ಮಣ್ಣಿನೊಳಗೆ ಹುದುಗಿ ಶತ್ರುಗಳಿಂದ ತನ್ನನ್ನು ತಾನು ರಕ್ಷಿಸಿಕೊಳ್ಳಬಲ್ಲ ಛಾತಿಯ ಈ ಹಾವನ್ನು ಫಕ್ಕನೆ ನೋಡಿದರೆ ಎರಡು ತಲೆ ಹಾವಿನಂತೆ ಕಾಣುತ್ತದೆ. ನುಣುಪು ಚರ್ಮ, ಮೊಂಡು ಬಾಲದ ಈ ನಿರುಪದ್ರವಿ 'ಮಣ್ಣು ಮುಕ್ಕ', ಮನುಷ್ಯನ ಮೌಢ್ಯಕ್ಕೆ ಬಲಿಯಾಗುತ್ತಿದೆ. ಜುಲೈ 16ರ 'ವಿಶ್ವ ಉರಗ ದಿನ'ದ ನೆಪದಲ್ಲಿ ಮಣ್ಣು ಮುಕ್ಕ ಹಾವಿನ ಪಿಸುಮಾತನ್ನು 'ಸುಧಾ' ಬಳಗದ ಬರಹಗಾರ **ಶಶಿಧರಸ್ವಾಮಿ ಆರ್. ಹಿರೇಮಠ** ಕೇಳಿಸಿಕೊಂಡಿದ್ದಾರೆ. ಹಾವಿನ ಅಂತರಂಗವನ್ನು ಅದರ ಮಾತುಗಳಲ್ಲೇ ಕೇಳಿ.

# ಕಥೆ ಹೇಳುವೆ, ನನ್ನ...

ಈ ಬಾರಿ ಮುಂಗಾರು ನಿರೀಕ್ಷಿಸಿದಷ್ಟು ಸುರಿಯುತ್ತಿಲ್ಲ. ಅಲ್ಲಿಷ್ಟು ಇಲ್ಲಿಷ್ಟು ಮಳೆ ಬೀಳುತ್ತಿದ್ದರೂ ಸೆಕೆ ಮಾತ್ರ ಇನ್ನೂ ಕಡಿಮೆಯಾಗಿಲ್ಲ. ನನಗೂ ಈ ಮಣ್ಣೊಳಗೆ ಕೂತು ಕೂತು ಸಾಕಾಯಿತು. ಸಂಜೆ, ಒಂದು ರೌಂಡು ವಾಕಿಂಗ್ ಹೋಗಿ ಬರುವಾ ಎಂದು ಹೊರಗೆ ಹೊರಟೆ.

ಮಣ್ಣನ್ನು ಸಡಿಲ ಮಾಡಿ ಭೂಮಿಯಿಂದ ಹೊರಬಂದು ಆ ತೋಟದ ಮಧ್ಯದ ಬದು ಹತ್ತಿ, ಆ ಕಡೆ ಹೋಗಬೇಕೆನ್ನುವಷ್ಟರಲ್ಲಿ ಯಾರೋ ಇಬ್ಬರು ಮಾತಾಡಿಕೊಳ್ಳುತ್ತಾ ನನ್ನ ಕಡೆಗೇ ಬರುತ್ತಿರೋದು ತಿಳೀತು. ಏನ್ಮಾಡೋದು, ಮಣ್ಣೊಳಗಿದ್ರೆ ಝಳದ ಕಾಟ, ಹೊರಗೆ ಬಂದ್ರೆ ಈ ಜನರ ಕಾಟ. ನನ್ನನ್ನೇನಾದ್ರೂ ಇವ್ರು ನೋಡಿದ್ರೆ ಕಿಡ್ನಾಪ್ ಮಾಡೋದು ಗ್ಯಾರಂಟಿ!

ದೇವರೇ... ಈಗ ನನ್ನ ನೀನೇ ಕಾಪಾಡಬೇಕು. ಹೇಗೂ ಹೊರಗೆ ಬಂದಾಗಿದೆ, ಬದುವಲ್ಲಿ ಸುಮ್ಮನೆ ಕುಳಿತುಬಿಟ್ರೆ ಆಯಿತು ಅಂದ್ಕೊಂಡು ಮಿಸುಕಾಡದೆ ಕುಳಿತೆ. ಅವರ ಹೆಜ್ಜೆ ಸದ್ದು ನನ್ನ ಸನಿಹದಲ್ಲೇ ಕೇಳಿದಂತಾಗಿ ಹೃದಯದ ಕಂಪನ ಅರೆ ಕ್ಷಣ ಸ್ತಬ್ಧವಾದಂತಾಯಿತು. ಕಣ್ಣು ತೆರೆದು ನೋಡಿದೆ.

ಅಬ್ಬಾ ಬದುಕಿದೆ. ಅಲ್ಲಿ ಬರ್ತಿರೋರು ಫೋಟೊಗ್ರಾಫರ್, ಅವ್ರಿಗೆ ಈ ಪ್ರಾಣಿ–ಪಕ್ಷಿ ಫೋಟೊ ಕ್ಲಿಕ್ಕಿಸುವ ಹುಚ್ಚು ಅಷ್ಟೇ. ನೆಮ್ಮದಿಯೆನ್ನಿಸಿತು.

ಅವರು ಬಂದು ಬದುವಿನ ಮೇಲೆ ಕುಳಿತ ನನ್ನನ್ನು ನೋಡಿ ಫೋಟೊ ಕ್ಲಿಕ್ಕಿಸತೊಡಗಿದರು. ನನಗೇಕೆ ಭಯ! ನಾನೂ ಅವರಿಗೆ ಪೋಸ್ ನೀಡತೊಡಗಿದೆ.

ನನ್ನ ಹೆಸರನ್ನೇ ಹೇಳೋದು ಮರೆತೆ ನೋಡಿ. ನಾನು 'ಮಣ್ಣು ಮುಕ್ಕ ಹಾವು'. ನನಗೆ ಒಂದೊಂದು ಕಡೆ ಒಂದೊಂದು ರೀತಿ ಕರೆಯುತ್ತಾರೆ. 'ಕೆಂಪು ಮರಳು ಹಾವು', 'ಎರಡು ತಲೆ ಹಾವು', 'ಕೆಂಪು ಇರ್ತಲೆ ಹಾವು', 'ಕೆಂಪು ಮಣ್ಣು ಮುಕ್ಕ ಹಾವು' – ಹೀಗೆಲ್ಲಾ ಕರೆಯುತ್ತಾರೆ.

'ರೆಡ್ ಸ್ಯಾಂಡ್ ಬೋವಾ' ಅಥವಾ 'ಇಂಡಿಯನ್ ರೆಡ್ ಸ್ಯಾಂಡ್ ಬೋವಾ' ಎಂಬ ಇಂಗ್ಲಿಷ್ ಹೆಸರು ನನ್ನದು. 'ಎರಿಕ್ಸ್ ಜಾನ್ಸಿ' ಎಂದು ವೈಜ್ಞಾನಿಕವಾಗಿ ಹೆಸರಿಟ್ಟಿದ್ದಾರೆ. ಸರೀಸೃಪ ವರ್ಗದ ಸ್ಕ್ವಾಮಾಟಾ ಗಣದ ಉರಗಗಳ 'ಬೋಯಿಡೇ' ಕುಟುಂಬಕ್ಕೆ ನನ್ನನ್ನು ಉರಗ ತಜ್ಞರು ಸೇರಿಸಿದ್ದಾರಂತೆ.

ನಾವು ಬೇರೆ ಹಾವುಗಳಂತಲ್ಲ. ವಿಷವಿಲ್ಲದ ಸೌಮ್ಯ ಸ್ವಭಾವದ ಹಾವುಗಳು. ನಮ್ಮ ಮೈ ಬಣ್ಣ ಕೆಂಪು ಮಿಶ್ರಿತ ಕಂದು, ಕೆಲ ಸಲ ಮಬ್ಬು ಕಂದಾಗಿರುತ್ತದೆ. ನಮ್ಮ ದಪ್ಪ ದೇಹ ಮಣ್ಣಿನಡಿ ಹಾಗೂ ಬಿಲವಾಸಕ್ಕೆ ತಕ್ಕದಾಗಿದೆ. ಗುದ್ದಲಿ ಆಕಾರದ ಮೂತಿ, ಮೊಂಡು ಬಾಲ ಇದೆ. ತಲೆ ಮತ್ತು ಬಾಲ ಒಂದೇ ರೀತಿ ಕಾಣುವುದರಿಂದ ಫಕ್ಕನೆ ನೋಡಿದರೆ ಬಾಲ ತಲೆಯಂತೆಯೇ ಕಾಣುತ್ತದೆ. ಹಾಗಾಗಿ ನಮಗೆ ಎರಡು ತಲೆಗಳಿರುವಂತೆ ನಿಮಗೆ ಕಾಣಿಸುತ್ತೇವೆ.

ಈ ದೇಹ ರಚನೆ, ನಮ್ಮನ್ನು ರಕ್ಷಿಸಿಕೊಳ್ಳಲು ಸೃಷ್ಟಿ ನೀಡಿರುವ ವರದಾನವೂ ಹೌದು. ತಲೆಯನ್ನು ದೇಹದೊಳಗೆ ಹುದುಗಿಸಿ ಬಾಲ ಹೊರಚಾಚಿ ಕುಳಿತುಕೊಂಡುಬಿಡುತ್ತೇವೆ. ನೇರ ಪಾಪೆಗಳಿರುವ ಸಣ್ಣದಾದ ಕಣ್ಣುಗಳು ತಲೆಯ ಪಾರ್ಶ್ವದಲ್ಲಿವೆ. ನಾಲಗೆ ಬಣ್ಣ ಕಂದಾಗಿದ್ದು, ಮನುಷ್ಯರ ಹಾಗೂ ಶತ್ರುಗಳ ಚಲನವಲನ, ಆಹಾರದ ಲಭ್ಯತೆ ಅರಿಯಲು ಆಗಾಗ ನಾಲಗೆ ಹೊರಚಾಚುತ್ತೇವೆ.